2015 ಕ.ತೀ.ವ 449

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪ್ರದೀಪ್ ಡಿ. ವೈಂಗಣಕರ

ಶ್ರೀಮತಿ ನಬೀಸಾ ಮತ್ತು ಇತರರು –ವಿರುದ್ಧ– ಶ್ರೀ ರವಿ ಕುಮಾರ್ ಮತ್ತು ಇತರರು*

ಮೋಟಾರು ವಾಹನ ಅಧಿನಿಯಮ, ಕಲಂ 173(1)ರಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿ.

ಹಿಂಬದಿ ಸವಾರನಾಗಿ ಮೋಟಾರ್ ಬೈಕ್‌ನಲ್ಲಿ ಚಲಿಸುತ್ತಿದ್ದ ವ್ಯಕ್ತಿಯು ಲಾರಿ ಚಾಲಕನ ದುಡುಕು ಹಾಗೂ ನಿರ್ಲಕ್ಷ್ಯತನದ ಚಾಲನೆಯಿಂದಾಗಿ ಉಂಟಾದ ಅಪಘಾತದಲ್ಲಿ ತೀವ್ರತರವಾಗಿ ಗಾಯಗೊಂಡು ಮೃತಪಟ್ಟ ಪರಿಣಾಮ ಆತನ ವಾರಸುದಾರರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ಹೊರಡಿಸಿದ ನ್ಯಾಯಾಧಿಕರಣದ ಐತೀರ್ಪನ್ನು ಪ್ರಶ್ನಿಸಿ ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಕ್ಲೇಮುದಾರರಿಂದ, ಹಾಗೂ ಪರಿಹಾರ ಮೊತ್ತವನ್ನು ಪ್ರಶ್ನಿಸಿ ವಿಮಾ ಕಂಪನಿಯಿಂದ ಸದರಿ ಪ್ರತ್ಯೇಕ ಮೇಲ್ಮನವಿಗಳು.

ವಾಹನ ಅಪಘಾತಕ್ಕೆ ಎರಡೂ ವಾಹನಗಳ ಚಾಲಕರು ಕಾರಣರಾದ್ದರಿಂದ ಇನ್ಶೂರೆನ್ಸ್ ಕಂಪನಿಯು ಪೂರ್ತಿ ಪರಿಹಾರವನ್ನು ನೀಡಿ ನಂತರ ಶೇ.50ರಷ್ಟು ಮೊತ್ತದ ಪರಿಹಾರ ಧನದ ವಸೂಲಾತಿಯನ್ನು ಮತ್ತೊಬ್ಬ ಇನ್ಶೂರೆನ್ಸ್ ಕಂಪನಿಯಿಂದ ಮಾಡಿಸಿಕೊಳ್ಳಬಹುದೆಂದು ಅಭಿಪ್ರಾಯಪಟ್ಟಿದೆ. ವಿವಿಧ ತೀರ್ಪುಗಳನ್ನಾಧರಿಸಿ ಹಾಗೂ ವಿವಿಧ ಶೀರ್ಷಿಕೆಗಳಡಿಯಲ್ಲಿ ಪರಿಹಾರ ಮೊತ್ತವನ್ನು 21,74,500/– ರಿಂದ 30,50,240/– ರೂ.ಗಳಿಗೆ ಹೆಚ್ಚಿಸಿದ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಗಳನ್ನು ವಿಲೇಖಿಸಿದೆ.

*ಎಂ.ಎಫ್.ಎ. ಸಂ. 11150/2012 (ಎಂವಿ) ಇದರೊಂದಿಗೆ ಇತರೆ, ದಿನಾಂಕ: 28ನೇ ಏಪ್ರಿಲ್, 2014.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. 2012 ಎಐಆರ್ ಎಸ್.ಸಿ.ಡಬ್ಲ್ಯೂ 2892*
*ಸಂತೋಷ್ ದೇವಿ* *(ಉಲ್ಲೇ) 8*
*2. 2004 (1) ಕೆಸಿಸಿಆರ್ 379 (ಎಫ್‌ಬಿ)*
*ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ –ವಿರುದ್ಧ–*
*ಅರುಣ @ ಅರವಿಂದ್* *(ಉಲ್ಲೇ) 8*
*3. 2009 ಎಸಿಜೆ 1298*
*ಸರಳ ವರ್ಮಾ* *(ಉಲ್ಲೇ) 9*

**ಎಂ.ಎಫ್.ಎ. ಸಂಖ್ಯೆ: 11150/2012 (ಎಂವಿ):**

ಅರ್ಜಿದಾರರ ಪರ : ಶ್ರೀ ಕೆ.ಎಸ್. ರಂಜಿತ್ – ವಕೀಲರ ಪರವಾಗಿ
ಶ್ರೀ ಕೆ.ಎ. ಅರಿಗ, ವಕೀಲರು.

3ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಹರಿಣಿ ಶಿವಾನಂದ–ವಕೀಲರು,

2ನೇ ಪ್ರತ್ಯರ್ಜಿದಾರರಿಗೆ ನೋಟಿಸನ್ನು ಆದೇಶ ದಿನಾಂಕ 3–4–2014ರ ಅನ್ವಯ ವರ್ಜಿಸಿದೆ.

1ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ ಮತ್ತು ಪ್ರತನಿಧಿಸಿರುವುದಿಲ್ಲ.

**ಎಂ.ಎಫ್.ಎ. ಸಂ. 7823/2012 (ಎಂವಿ) :**

ಅರ್ಜಿದಾರರ ಪರ : ಶ್ರೀಮತಿ ಹರಿಣಿ ಶಿವಾನಂದ – ವಕೀಲರು,

1ರಿಂದ 3ನೇ ಪ್ರತ್ಯರ್ಜಿದಾರರಿಗೆ : ಶ್ರೀ ಕೆ.ಎಸ್. ರಣಜಿತ್ – ವಕೀಲರ ಪರವಾಗಿ
ಶ್ರೀ ಕೆ.ಎ. ಅರಿಗ–ವಕೀಲರು.

5ನೇ ಪ್ರತ್ಯರ್ಜಿದಾರರಿಗೆ ನೋಟೀಸನ್ನು ಆದೇಶ ದಿನಾಂಕ 4–6–2013ರ ಅನ್ವಯ ವರ್ಜಿಸಿದೆ.

4ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ ಮತ್ತು ಪ್ರತಿನಿಧಿಸಿರುವುದಿಲ್ಲ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್:**

ಇಬ್ಬರು ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರ ಸಮ್ಮತಿಯೊಂದಿಗೆ, ಅಂಗೀಕಾರಕ್ಕಾಗಿ, ಈ ಅಪೀಲುಗಳನ್ನು ಸಲ್ಲಿಸಿದ್ದಾಗ್ಯೂ, ಅವುಗಳನ್ನು ಅಂತಿಮ ವಿಲೆಗೆ ಕೈಗೆತ್ತಿಕೊಳ್ಳಲಾಯಿತು.

2. ಅನುಕ್ರಮವಾಗಿ, ಕ್ಲೇಮುದಾರರು ಮತ್ತು ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್, ಇವುಗಳು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹೆಚ್ಚುವರಿ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಉಡುಪಿ (ಸಂಕ್ಷಿಪ್ತವಾಗಿ ನ್ಯಾಯಾಧಿಕರಣ) ಇದು ಎಂ.ವಿ.ಸಿ. ಸಂ. 437/2009ರಲ್ಲಿ ಹೊರಡಿಸಿದ 2012ರ ಮೇ 4ರಂದಿನ ಒಂದೇ ತೀರ್ಪು ಮತ್ತು ಐತೀರ್ಪಿನ ವಿರುದ್ಧ ಅರ್ಜಿ ಸಲ್ಲಿಸಿರುತ್ತಾರೆ.

3. ಮೋಟಾರು ಸೈಕಲ್ ಸವಾರನ ಕಡೆಯಿಂದಾದ ಸಹಾಯಕಾರಿ ನಿರ್ಲಕ್ಷ್ಯದ ಕಾರಣಕ್ಕಾಗಿ, ಶೇ.50ರಷ್ಟನ್ನು ಕಡಿತಗೊಳಿಸಿ ತರುವಾಯ, ನ್ಯಾಯಾಧಿಕರಣವು ನೀಡಿದ 21,64,500/– ರೂ.ಗಳ ಪರಿಹಾರವು ಸಾಕಷ್ಟಾಗುವುದಿಲ್ಲ ಮತ್ತು ಸಹಾಯಕಾರಿ ನಿರ್ಲಕ್ಷ್ಯವು ರದ್ದುಪಡಿಸಲು ತಕ್ಕುದಾಗಿರುತ್ತದೆಯೆಂಬ ಆಧಾರದ ಮೇಲೆ ಪರಿಹಾರವನ್ನು ಹೆಚ್ಚಿಸಲು ಕೋರಿ ಕ್ಲೇಮುದಾರರು ಅಪೀಲನ್ನು ಸಲ್ಲಿಸಿರುವಾಗ; ವಿಮಾಕಂಪನಿಯು, ಕ್ಲೇಮುದಾರರ ಪರವಾಗಿ ಐತೀರ್ಪು ನೀಡಿ ವಾರ್ಷಿಕ ಶೇ.6ರಷ್ಟು ಬಡ್ಡಿ ದರದೊಂದಿಗೆ 21,64,500/– ರೂ.ಗಳ ಪರಿಹಾರವನ್ನು ನೀಡಿರುವುದು ತುಂಬಾ ಹೆಚ್ಚಿನ ಪ್ರಮಾಣದ್ದಾಗಿದೆ ಎಂಬ ಆಧಾರದ ಮೇಲೆ ಪರಿಹಾರವನ್ನು ಕಡಿಮೆ ಮಾಡಬೇಕೆಂದು ಕೋರಿ ಅಪೀಲು ಸಲ್ಲಿಸಿರುತ್ತದೆ.

4. ದಿನಾಂಕ 25.11.2008ರಂದು ಸುಮಾರು, ಸಂಜೆ 5.15 ನಿಮಿಷದಲ್ಲಿ, ಮೃತ ಯು.ಕೆ. ಮೊಹಮದ್ ಅಸಿಫ್, ಕೆಎ–20/ಎಸ್–9034 ಎಂಬ ನೋಂದಣಿ

ಸಂಖ್ಯೆಯನ್ನು ಹೊಂದಿದ್ದ ಮೋಟಾರು ಸೈಕಲ್ಲಿನ ಹಿಂಬದಿಯಲ್ಲಿ ಕುಳಿತು ಆನೆಕೆರೆಯಿಂದ ದೂಪದಕಟ್ಟೆ ಕಡೆಗೆ ಪ್ರಯಾಣಿಸುತ್ತಿದ್ದಾಗ, ಕಾರ್ಕಳದ ಕೃಷ್ಣ ಮಂದಿರ್ ಜಂಕ್ಷನ್ ಬಳಿ ಸಂ. ಕೆಎ–19/ಬಿ–6477 ಎಂಬ ನೋಂದಣಿ ಸಂಖ್ಯೆಯನ್ನು ಹೊಂದಿದ್ದ ಐಷರ್ ಟ್ಯಾಂಕರ್ ಲಾರಿಗೆ ಢಿಕ್ಕಿಹೊಡೆದು ಅಪಘಾತಕ್ಕೊಳಗಾಗಿ, ಗಂಭೀರವಾಗಿ ಗಾಯಗೊಂಡಿರುತ್ತಾರೆ ಮತ್ತು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯದಲ್ಲಿ ಮೃತರಾಗಿರುತ್ತಾರೆ ಎಂಬ ವಿಷಯಗಳು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಾಗಿರುತ್ತವೆ.

5. ಅಪಘಾತದ ದಿನಾಂಕಕ್ಕೆ ಮೊದಲು, ಮೃತ ವ್ಯಕ್ತಿಯು ಆರೋಗ್ಯವಂತನೂ, ದೃಢಕಾಯನೂ ಆಗಿದ್ದು, ಎನ್.ಎಂ.ಸಿ. ಸ್ಪೆಷಾಲಿಟಿ ಹಾಸ್ಪಿಟಲ್, ಅಬುದಾಬಿಯಲ್ಲಿ ಅಕೌಂಟೆಂಟ್ ಆಗಿ ಕಾಯನಿರ್ವಹಿಸುತ್ತಿದ್ದು, ಮಾಸಿಕ 3,500/–ದಿನಾರಗಳಷ್ಟು (45,000/– ರೂ.ಗಳಿಗೆ ಸಮನಾದ) ಆದಾಯವನ್ನು ಗಳಿಸುತ್ತಿರುತ್ತಾನೆ. ಮೃತವ್ಯಕ್ತಿಯ ಅಕಾಲಿಕ ಮತ್ತು ಅಸ್ವಾಭಾವಿಕ ಮರಣದಿಂದಾಗಿ, ಕ್ಲೇಮುದಾರರಾಗಿರುವ ಆತನ ತಂದೆ–ತಾಯಿಯರು ಮತ್ತು ಸಹೋದರಿಯರು ನೈತಿಕ ಮತ್ತು ಸಾಮಾಜಿಕ ಭದ್ರತೆಗೆ ಬದಲಾಗಿ ಪ್ರೀತಿ, ವಾತ್ಸಲ್ಯ ಮತ್ತು ಹಣಕಾಸು ಬೆಂಬಲವನ್ನು ಕಳೆದುಕೊಂಡಿರುತ್ತಾರೆ. ಆದುದರಿಂದ ಅವರಿಗೆ ಯುಕ್ತವಾಗಿ ಪರಿಹಾರವನ್ನು ನೀಡಬೇಕಾಗಿರುತ್ತದೆ ಎಂಬುದು ಕ್ಲೇಮುದಾರರ ವಾದವಾಗಿರುತ್ತದೆ.

6. ರಸ್ತೆಸಂಚಾರ ಅಪಘಾತದಲ್ಲಿ ಮೃತನ ಸಾವಿನಿಂದಾಗಿ, ಕ್ಲೇಮುದಾರರು, ಅಪರಾಧಕ್ಕೆ ಗುರಿಯಾಗಿರುವ ಲಾರಿಯ ಮಾಲೀಕ, ಚಾಲಕ ಮತ್ತು ವಿಮಾಕಂಪನಿಯ ವಿರುದ್ಧ 75,00,000/– ಲಕ್ಷ ರೂ.ಗಳ ಮೊಬಲಗಿನ ಪರಿಹಾರವನ್ನು ಕೋರಿ ನ್ಯಾಯಾಧಿಕರಣದ ಮುಂದೆ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಕ್ಲೇಮು ಅರ್ಜಿಯು 2012ರ ಮೇ 4ರಂದು ನ್ಯಾಯಾಧಿಕರಣದ ಮುಂದೆ ಪರಿಗಣನೆಗಾಗಿ ಬಂದಿರುತ್ತದೆ. ನ್ಯಾಯಾಧಿಕರಣವು, ಕಡತದಲ್ಲಿ ಲಭ್ಯವಾದ ಸೂಕ್ತ ವಿಷಯವನ್ನು ಪರಿಗಣಿಸಿದ ತರುವಾಯ ಮತ್ತು ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ, ಮೋಟಾರು ವಾಹನದ ಸವಾರನಿಂದ ಆಗಿರುವ ಸಹಾಯಕಾರಿ ನಿರ್ಲಕ್ಷ್ಯವನ್ನು ನಿಗದಿಗೊಳಿಸಿ ಅದಕ್ಕೆ ಸಂಬಂಧಿಸಿದಂತೆ ಶೇ.50ರಷ್ಟನ್ನು

ಕಡಿತಗೊಳಿಸಿದ ತರುವಾಯ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಠೇವಣಿ ಮಾಡಿದ ದಿನಾಂಕದವರೆಗೆ, ಪ್ರತಿವರ್ಷ ಶೇ.6ರಷ್ಟು ಬಡ್ಡಿಯೊಂದಿಗೆ ವಿವಿಧ ಶೀರ್ಷಿಕೆಗಳಡಿಯಲ್ಲಿ 21,64,500/– ರೂ.ಗಳ ಮೊಬಲಗಿನ ಐತೀರ್ಪು ನೀಡಿ ಭಾಗಶಃ ಕ್ಲೇಮು ಅರ್ಜಿಯನ್ನು ಅಂಗೀಕರಿಸಿರುತ್ತದೆ. ನ್ಯಾಯಾಧಿಕರಣವು ಐತೀರ್ಪು ನೀಡಿದ ಪರಿಹಾರದ ಪ್ರಮಾಣವು ಸಾಕಾಗುವುದಿಲ್ಲವಾದ್ದರಿಂದ, ಅಲ್ಲದೆ ನ್ಯಾಯಾಧಿಕರಣವು ನಿಗದಿಪಡಿಸಿರುವ ಶೇ.50ರಷ್ಟು ಸಹಾಯಕಾರಿ ನಿರ್ಲಕ್ಷ್ಯದಿಂದ ಬಾಧಿತರಾಗಿರುವ ಕ್ಲೇಮುದಾರರು, ಪರಿಹಾರವನ್ನು ಹೆಚ್ಚಿಸಲು ಮತ್ತು ಸಹಾಯಕಾರಿ ನಿರ್ಲಕ್ಷ್ಯವನ್ನು ರದ್ದುಪಡಿಸಲು ಅರ್ಜಿ ಸಲ್ಲಿಸಿರುತ್ತಾರೆ. ಮತ್ತು ಅತ್ಯಧಿಕ ಮತ್ತು ಮಿತಿಮೀರಿದ ಪರಿಹಾರದ ಪ್ರಮಾಣದಿಂದ ಬಾಧಿತರಾಗಿರುವ ಲಾರಿಯ ವಿಮಾಕಂಪನಿಯು ಪರಿಹಾರವನ್ನು ಕಡಿಮೆ ಮಾಡಬೇಕೆಂದು ಅಪೀಲನ್ನು ಸಲ್ಲಿಸಿರುತ್ತಾರೆ.

7. ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಕೆ.ಎ.ಅರಿಗ, ಮತ್ತು ವಿಮಾಕಂಪನಿಯ ಪರ ಹಾಜರಾದ ನ್ಯಾಯವಾದಿ ಶ್ರೀಮತಿ ಹರಿಣಿ ಶಿವಾನಂದ ಇವರುಗಳು, ಕ್ಲೇಮುದಾರರು ಮತ್ತು ವಿಮಾಕಂಪನಿಗಳು ಸಲ್ಲಿಸಿದ ಅಪೀಲುಗಳಲ್ಲಿ ಪ್ರಸ್ತಾಪಿಸಿರುವ ಆಧಾರಗಳನ್ನು ಮತ್ತು ನಮ್ಮ ಮುಂದೆ ಮಂಡಿಸಿರುವ ಮೂಲ ದಾಖಲೆಗಳನ್ನು ಒಳಗೊಂಡಂತೆ, ನ್ಯಾಯಾಧಿಕರಣವು ಹೊರಡಿಸಿರುವ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಎಚ್ಚರಿಕೆಯಿಂದ ಪರಿಶೀಲಿಸಿರುತ್ತೇವೆ.

8. ಕ್ಲೇಮುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ನ್ಯಾಯಾಧಿಕರಣವು ಒಟ್ಟಾರೆಯಾಗಿ, ಅವಲಂಬನೆಯ ನಷ್ಟಕ್ಕೆ ಸಂಬಂಧಿಸಿದಂತೆ ಯುಕ್ತ ಪರಿಹಾರವನ್ನು ನೀಡದೆ ತಪ್ಪನ್ನು ಎಸಗಿದೆ ಮತ್ತು ಸಾಂಪ್ರದಾಯಿಕ ಶೀರ್ಷಿಕೆಗಳಂಥ ಅವಲಂಬನೆಯ ನಷ್ಟಕ್ಕಾಗಿ ನೀಡಿರುವ ಪರಿಹಾರವು ಕಡಿಮೆ ಮೊತ್ತದ್ದಾಗಿರುತ್ತದೆಂದು ಬಲವಾಗಿ ವಾದಿಸಿರುತ್ತಾರೆ. ಸದರಿ ನಿವೇದನೆಯನ್ನು ರುಜುವಾತುಪಡಿಸಲು ಮೃತನಾದ ವ್ಯಕ್ತಿಯು ಸುಮಾರು 28 ವರ್ಷಗಳ ವಯೋಮಾನದವನಾಗಿದ್ದು, 2004ರಿಂದ ಅಬುದಾಬಿಯಲ್ಲಿನ ಎನ್.ಎಂ.ಸಿ. ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅಕೌಂಟೆಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ತಿಂಗಳಿಗೆ 45,000/–ರೂ.ಗಳಿಗೆ ಸಮನಾಗಿರುವಂಥ 3,500/– ದಿನಾರಗಳನ್ನು

ಗಳಿಸುತ್ತಿದ್ದನೆಂದು ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ***ಸಂತೋಷ್ ದೇವಿ*** [1], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪ್ರಸ್ತಾಪಿಸಿ, ಉದಾಹರಿಸಿರುತ್ತಾರೆ. ಮತ್ತು ಕ್ಲೇಮುದಾರರು, ಅವಲಂಬನೆಯು ನಷ್ಟಕ್ಕೆ ಸಂಬಂಧಿಸಿದಂತೆ ಪರಿಹಾರವನ್ನು ಲೆಕ್ಕಹಾಕುವಾಗ ಭವಿಷ್ಯದ ನಷ್ಟಕ್ಕೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ ಶೇ.30ರಷ್ಟಕ್ಕೆ ಹಕ್ಕುಳ್ಳವರಾಗಿರುತ್ತಾರೆಂದು ಮತ್ತು ಅಪಘಾತದ ಸಮಯದಲ್ಲಿ ಆತನ ತಾಯಿಗೆ 47 ವರ್ಷ ವಯಸ್ಸಾಗಿದ್ದು, ಚಿಕ್ಕ ವಯಸ್ಸಿನ ತಂದೆ–ತಾಯಿಯರೆಂಬುದನ್ನು ಪರಿಗಣಿಸಿ, ಅನ್ವಯಿಸಬಹುದಾದ ಸರಿಯಾದ ಗುಣಕ 14 ಆಗಿರುತ್ತದೆಂದು ನಿವೇದಿಸಿಕೊಳ್ಳಲಾಗಿರುತ್ತದೆ.

ಮುಂದುವರೆದು, ***ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ –ವಿರುದ್ಧ– ಅರುಣ @ ಅರವಿಂದ್*** [2], ಪ್ರಕರಣದಲ್ಲಿನ ಈ ನ್ಯಾಯಾಲಯದ ಪೂರ್ಣಪೀಠದ ತೀರ್ಪನ್ನು ಉದಾಹರಿಸಿ, ಕ್ಲೇಮುದಾರರು, ಜಂಟಿ ಖಾಸಗಿ ತಕ್ಸೀರುಗಾರರಲ್ಲಿ ಒಬ್ಬರಿಂದ ಪರಿಹಾರವನ್ನು ಪಡೆದುಕೊಳ್ಳಬಹುದಾಗಿರುತ್ತದೆ ಮತ್ತು ಅವನು ಹಕ್ಕುಳ್ಳಂಥ ನ್ಯಾಯಯುತ ಪರಿಹಾರವನ್ನು, ಇತರೆ ಜಂಟಿ ಖಾಸಗಿ ತಕ್ಸೀರುಗಾರನು ಪಕ್ಷಕಾರನಾಗದೆ ಜಂಟಿ ಖಾಸಗಿ ತಕ್ಸೀರುಗಾರರಲ್ಲಿ ಒಬ್ಬನ ವಿರುದ್ಧ ಸಲ್ಲಿಸುವ ಕ್ಲೇಮು ಅರ್ಜಿಯು ಊರ್ಜಿತವಾಗಿರುತ್ತದೆ ಮತ್ತು ಪಕ್ಷಕಾರನಾಗಿರುವ ಖಾಸಗಿ ತಕ್ಸೀರುಗಾರನು ಐತೀರ್ಪನ್ನು ಅನುಸರಿಸಲು ಬದ್ಧನಾಗಿರುತ್ತಾನೆ ಮತ್ತು ಇತರೆ ಖಾಸಗಿ ತಕ್ಸೀರುಗಾರನ ನಿರ್ಲಕ್ಷ್ಯವು ಕ್ಲೇಮುದಾರನಿಗೆ ಸಂದಾಯ ಮಾಡಬಹುದಾದ ಪರಿಹಾರವನ್ನು ಕಡಿತಗೊಳಿಸಲು ಸಹಾಯಕಾರಿಯಾಗುವಂತಿಲ್ಲ. ಆದ್ದರಿಂದ ನ್ಯಾಯಾಧಿಕರಣವು ಶೇ.50ರಷ್ಟು ಪರಿಹಾರವನ್ನು ಕಡಿತಗೊಳಿಸಿರುವುದನ್ನು, ನ್ಯಾಯಾಧಿಕರಣವು ನೀಡಿರುವ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಮಾರ್ಪಾಡುಗೊಳಿಸಿರುವ ಮೂಲಕ ರದ್ದುಪಡಿಸಲು ಬದ್ಧವಾಗಿರುತ್ತದೆಂದು ಭಾವೋದ್ವೇಗದಿಂದ ನಿವೇದಿಸಿಕೊಂಡಿರುತ್ತಾರೆ.

9. ಇದಕ್ಕೆ ಪ್ರತಿಯಾಗಿ, ವಿಮಾಕಂಪನಿಯ ಪರ ಹಾಜರಾದ ನ್ಯಾಯವಾದಿ ಶ್ರೀಮತಿ ಹರಿಣಿ ಶಿವಾನಂದ ಇವರು, ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆಗೆ

1. 2012 ಎಐಆರ್ ಎಸ್.ಸಿ.ಡಬ್ಲ್ಯೂ 2892

2. 2004 (1) ಕೆಸಿಸಿಆರ್ 379 (ಎಫ್‌ಬಿ)

ಸಂಬಂಧಿಸಿದಂತೆ ಯಾವುದೇ ಮೊಬಲಗನ್ನು ಕಡಿತಗೊಳಿಸದೆ ***ಸರಳ ವರ್ಮಾ***[3], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿರುವ ಕಾನೂನಿಗನುಸಾರವಾದ ಪ್ರಮಾಣವನ್ನು ಅನುಸರಿಸದೆ ನ್ಯಾಯಾಧಿಕರಣವು ಸಂಪೂರ್ಣವಾಗಿ ದೋಷವೆಸಗಿರುತ್ತದೆ. ಭಾರತೀಯ ರೂಪಾಯಿಗಳಲ್ಲಿ ಹೇಳುವುದಾದರೆ, ಈತ ಪ್ರತಿ ತಿಂಗಳು 42,000/- ರೂ.ಗಳನ್ನು ಸಂಬಳದಂತೆ ಪಡೆಯುತ್ತಿರುತ್ತಾನೆ. ಆದ್ದರಿಂದ, ಆದಾಯ ತೆರಿಗೆಯನ್ನು ಮೇಲೆ ಹೇಳಿದ ತೀರ್ಪಿನಲ್ಲಿ ಹೇಳಿರುವ ಅನುಪಾತದ ಮೇರೆಗೆ ಕಡಿತಗೊಳಿಸಲೇ ಬೇಕಾಗಿರುತ್ತದೆಂದು ದೃಢವಾಗಿ ವಾದಿಸಿರುತ್ತಾರೆ. ಮುಂದುವರೆದು, ನ್ಯಾಯಾಧಿಕರಣವು, ಮೃತವ್ಯಕ್ತಿಯು ಅವಿವಾಹಿತನಾಗಿರುವ ಕಾರಣಕ್ಕಾಗಿ, ಮೇಲೆ ಹೇಳಿದ ತೀರ್ಪಿನಲ್ಲಿ ಅಭಿಪ್ರಾಯಪಟ್ಟಂತೆ ಚಿಕ್ಕ ವಯಸ್ಸಿನ ತಂದೆ-ತಾಯಿಯರನ್ನು ಪರಿಗಣಿಸುವುದಕ್ಕೆ ಬದಲಾಗಿ, ಮೃತನ ವಯಸ್ಸನ್ನು ಪರಿಗಣಿಸಿ, 17ನೇ ಗುಣಕವನ್ನು ಅಳವಡಿಸಿಕೊಂಡಿರುವುದು ಸಂಪೂರ್ಣವಾಗಿ ದೋಷ ಪೂರ್ಣವಾಗಿರುತ್ತದೆಂದು ಭಾವೋದ್ವೇಗದಿಂದ ನಿವೇದಿಸಿಕೊಂಡಿರುತ್ತಾರೆ. ಆದ್ದರಿಂದ, ನ್ಯಾಯವಾದಿಯು, ಮೃತ ವ್ಯಕ್ತಿಯ ಆದಾಯದ ಪೈಕಿ ಶೇ.50ರಷ್ಟನ್ನು ಮೃತನ ವೈಯಕ್ತಿಕ ಮತ್ತು ಜೀವನ ವೆಚ್ಚಗಳಿಗೆ ಸಂಬಂಧಿಸಿದಂತೆ ಕಡಿತಗೊಳಿಸಬಹುದು, ತರುವಾಯ ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆಯನ್ನು ಕಡಿತಗೊಳಿಸಿದ ತರುವಾಯ, 14ರ ಗುಣಕವನ್ನು ಅನ್ವಯಿಸಿಕೊಂಡು, ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಮಾರ್ಪಾಡುಗೊಳಿಸಿ ಪರಿಹಾರವನ್ನು, ಅವಲಂಬನೆಯ ನಷ್ಟಕ್ಕೆ, ಅಲ್ಲದೆ ಸಾಂಪ್ರದಾಯಿಕ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ನೀಡಬಹುದಾಗಿರುತ್ತದೆಂದು ವಾದಿಸಿರುತ್ತಾರೆ.

ಮುಂದುವರೆದು, ಕ್ಲೇಮುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಉದಾಹರಿಸಿದ ಈ ನ್ಯಾಯಾಲಯದ ಪೂರ್ಣಪೀಠದ ತೀರ್ಪಿಗೆ ಸಂಬಂಧಿಸಿದಂತೆ, ಈಕೆ ವಾಹನಕ್ಕೆ ಬಜಾಜ್ ಅಲಿಯನ್ಜ್ ಪ್ರೈ. ಲಿ. ನಲ್ಲಿ ವಿಮೆ ಮಾಡಿಸಿದ್ದು, ಸದರಿ ವಿಮೆಯು ಅಪಘಾತವಾದ ದಿನಾಂಕದಂದು ಜಾರಿಯಲ್ಲಿತ್ತೆಂಬ ಆಧಾರದ ಮೇಲೆ, ಕಾನೂನಿಗನುಸಾರವಾಗಿ, ಸಂ.ಕೆಎ-20/ಎಸ್-9034 ನೋಂದಣಿ ಸಂಖ್ಯೆಯನ್ನು ಹೊಂದಿರುವ ಮೋಟಾರು ಸೈಕಲಿನ ಮಾಲೀಕ ಮತ್ತು ವಿಮಾಕಂಪನಿಯಿಂದ

3. 2009 ಎಸಿಜೆ 1298

ಉಳಿದ ಶೇ.50ರಷ್ಟನ್ನು ಸಂದಾಯ ಮಾಡಲು ಮತ್ತು ವಸೂಲಿ ಮಾಡಲು ವಿಮಾಕಂಪನಿಗೆ ಸ್ವತಂತ್ರವನ್ನು ಮೀಸಲಿರಿಸಬಹುದಾಗಿರುತ್ತದೆಂದು ನಿವೇದಿಸಿ ಕೊಂಡಿರುತ್ತಾರೆ.

10. ಪಕ್ಷಕಾರರ ಪರಸ್ಪರ ವಿರುದ್ಧವಾದ ವಾದಗಳನ್ನು ಆಲಿಸಿದ ತರುವಾಯ, ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಪರಿಶೀಲಿಸಿದ ತರುವಾಯ, ಮತ್ತು ಕಡತದ ಮೇಲೆ ಲಭ್ಯವಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಮರುವಿವೇಚಿಸಿದ ತರುವಾಯ, ಈ ಎರಡೂ ಅಪೀಲುಗಳಲ್ಲಿ ನಮ್ಮ ಪರಿಗಣನೆಗಾಗಿ ಉದ್ಭವಿಸಿರುವ ಅಂಶಗಳು ಈ ಮುಂದಿನಂತಿವೆ :

**i) ನ್ಯಾಯಾಧಿಕರಣವು, ಪರಿಹಾರದ ಶೇ.50ರಷ್ಟನ್ನು ಮಾತ್ರ ಠೇವಣಿ ಮಾಡಲು, ಓರಿಯಂಟಲ್ ಇನ್ಶೂರೆನ್ಸ್ ಕಂಪನಿಗೆ ನಿರ್ದೇಶಿಸಿ, ಕ್ಲೇಮುದಾರರಿಗೆ ಸಂದಾಯ ಮಾಡಬಹುದಾದ ಒಟ್ಟು ಪರಿಹಾರದ ಪೈಕಿ ಶೇ.50ರಷ್ಟನ್ನು ಕಡಿತಗೊಳಿಸಲು ಸೂಚಿಸಿರುವುದು ಸಮರ್ಥನೀಯವೇ?**

**ii) ನ್ಯಾಯಾಧಿಕರಣವು ಐತೀರ್ಪು ನೀಡಿದ ಪರಿಹಾರದ ಪ್ರಮಾಣವು ನ್ಯಾಯಯುತವು ಮತ್ತು ಸರಿಯಾದುದು ಆಗಿದೆಯೇ ಅಥವಾ ಕಡಿಮೆ ಮಾಡಲು ತಕ್ಕುದಾಗಿದೆಯೇ?**

**ಪರಿಶೀಲನಾಂಶ 1:** ನಮ್ಮ ಮುಂದೆ ಮಂಡಿಸಿದ ಮೂಲ ದಾಖಲೆಗಳನ್ನೂ ಒಳಗೊಂಡಂತೆ ನ್ಯಾಯಾಧಿಕರಣವು ಹೊರಡಿಸಿರುವ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ತರುವಾಯ, ಅಪಘಾತ ನಡೆದಿರುವುದು ಮತ್ತು ಯು.ಕೆ.ಮಹಮದ್ ಆಸೀಫ್ ಮರಣ ಹೊಂದಿರುವುದರಲ್ಲಿ ಯಾವುದೇ ವಿವಾದವಿರುವುದಿಲ್ಲವೆಂದು ಕಂಡುಬಂದಿರುತ್ತದೆ. ಅಲ್ಲದೆ ಕ್ಲೇಮುದಾರರಲ್ಲಿ ಮೃತನ

ತಂದೆ–ತಾಯಿ ಮತ್ತು ಸಹೋದರಿಯಲ್ಲದೆ ಬೇರೆಯವರಿಲ್ಲ ಎಂಬುದರಲ್ಲೂ ಯಾವುದೇ ವಿವಾದವಿರುವುದಿಲ್ಲ.

11. ***ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ –ವಿರುದ್ಧ– ಅರುಣ್ @ ಅರವಿಂದ್*** ಮೇಲಿನ ಪ್ರಕರಣದಲ್ಲಿ, ಈ ನ್ಯಾಯಾಲಯದ ಮಾನ್ಯ ಪೂರ್ಣಪೀಠವು ವಿಧಿಸಿದ, ಪೂರ್ಣಪ್ರಮಾಣದ ಕಾನೂನಿನ ದೃಷ್ಟಿಯಲ್ಲಿ, ಕ್ಲೇಮುದಾರರು ಜಂಟಿ ಖಾಸಗಿ–ತಕ್ಸೀರುಗಾರನಿಂದ ಪರಿಹಾರವನ್ನು ವಸೂಲಿ ಮಾಡಬಹುದು ಮತ್ತು ಅವನು ಹಕ್ಕುಳ್ಳಂಥ ನ್ಯಾಯಯುತ ಪರಿಹಾರವನ್ನು, ಇತರೆ ಜಂಟಿ–ಖಾಸಗಿ ತಕ್ಸೀರುಗಾರನು ಪಕ್ಷಕಾರನಾಗದಿರುವುದಕ್ಕಾಗಿ ಕಡಿತಗೊಳಿಸುವಂತಿಲ್ಲ ಮತ್ತು ಇತರೆ ಖಾಸಗಿ ತಕ್ಸೀರುಗಾರನು ಪಕ್ಷಕಾರನಾಗದೆ ಜಂಟಿ ಖಾಸಗಿ ತಕ್ಸೀರುಗಾರರಲ್ಲಿ, ಒಬ್ಬನ ವಿರುದ್ಧ ಸಲ್ಲಿಸುವ ಕ್ಲೇಮು ಅರ್ಜಿಯು ಊರ್ಜಿತವಾಗಿರುತ್ತದೆ ಮತ್ತು ಪಕ್ಷಕಾರನಾಗಿರುವ ಖಾಸಗಿ ತಕ್ಸೀರುಗಾರನು ಐತೀರ್ಪನ್ನು ಅನುಸರಿಸಲು ಬದ್ಧನಾಗಿರುತ್ತಾನೆ ಮತ್ತು ಇತರೆ ಖಾಸಗಿ ತಕ್ಸೀರುಗಾರನ ನಿರ್ಲಕ್ಷ್ಯವು ಕ್ಲೇಮುದಾರನಿಗೆ ಸಂದಾಯ ಮಾಡಬಹುದಾದ ಪರಿಹಾರವನ್ನು ಕಡಿತಗೊಳಿಸಲು ಸಹಾಯಕಾರಿಯಾಗುವಂತಿಲ್ಲ.

12. ಪ್ರಸ್ತುತ ಪ್ರಕರಣದಲ್ಲಿ, ಒಪ್ಪಿಕೊಂಡಂತೆ, ರಸ್ತೆ ಸಾರಿಗೆ ಅಪಘಾತದಲ್ಲಿ ಎರಡು ವಾಹನಗಳು ಒಳಗೊಂಡಿರುತ್ತವೆ ಅಂದರೆ, ಕೆಎ–20/ಎಸ್–9034 ನೋಂದಣಿ ಸಂಖ್ಯೆಯನ್ನು ಹೊಂದಿರುವ ಮೋಟಾರು ಸೈಕಲ್ಲು ಮತ್ತು ಕೆಎ–19/ಬಿ–6477 ನೋಂದಣಿ ಸಂಖ್ಯೆಯನ್ನು ಹೊಂದಿರುವ ಐಷರ್ ಟ್ಯಾಂಕರ್ ಲಾರಿಗಳಾಗಿರುತ್ತವೆ. ಐಷರ್ ಟ್ಯಾಂಕರ್ ಲಾರಿಯ ಮಾಲೀಕ ಮತ್ತು ವಿಮಾಕಂಪನಿಯ ದಾಖಲೆಗಳಲ್ಲಿ ಬಂದಿರುತ್ತಾರೆ ಮತ್ತು ಇತರೆ ಖಾಸಗಿ ತಕ್ಷೀರುಗಾರರು ಅಂದರೆ ಮೃತ ವ್ಯಕ್ತಿಯ ಮೋಟಾರು ಸೈಕಲ್ಲಿನ ವಿಮಾಕಂಪನಿಯು ಪಕ್ಷಕಾರನಾಗಿರುವುದಿಲ್ಲ. ಇತರೆ ವಿಮಾಕಂಪನಿಯು ಪಕ್ಷಕಾರನಾಗಿಲ್ಲವೆಂಬ ಮಾತ್ರಕ್ಕೆ ರಸ್ತೆ ಸಾರಿಗೆ ಅಪಘಾತದಲ್ಲಿ ಮೃತ ವ್ಯಕ್ತಿಯ ಮರಣಕ್ಕೆ ಸಂಬಂಧಿಸಿದಂತೆ ಕ್ಲೇಮುದಾರ ಯುಕ್ತ ಪರಿಹಾರದ ಕಾನೂನುಸಮ್ಮತತೆಯ ಹಕ್ಕಿನಿಂದ ಹೊರಗುಳಿಯುವಂತಿಲ್ಲ. ಮತ್ತು ಪಕ್ಷಕಾರನಾಗಿರದ ಖಾಸಗಿ ತಕ್ಸೀರುಗಾರನಾಗಿರುವ ಓರಿಯಂಟಲ್ ಇನ್ಶೂರೆನ್ಸ್ ಕಂಪನಿಯು ಐತೀರ್ಪನ್ನು

ಪಾಲಿಸಲು ಬದ್ಧವಾಗಿರುತ್ತದೆ ಮತ್ತು ಇತರೆ ಖಾಸಗಿ ತಕ್ಸೀರುಗಾರನ ನಿರ್ಲಕ್ಷ್ಯವು ಕ್ಲೇಮುದಾರರಿಗೆ ಸಂದಾಯ ಮಾಡಬಹುದಾದ ಪರಿಹಾರವನ್ನು ಕಡಿತಗೊಳಿಸಲು ಸಹಾಯಕಾರಿಯಾಗುವಂತಿಲ್ಲ.

13. ಮೋಟಾರು ಸೈಕಲ್ ಸವಾರ ಮತ್ತು ಐಷರ್ ಟ್ಯಾಂಕರ್ ಲಾರಿಯ ಚಾಲಕ, ಪ್ರತಿಯೊಬ್ಬರ ಭಾಗದ ಮೇಲೆ ಸಹಾಯಕಾರಿ ನಿರ್ಲಕ್ಷ್ಯವನ್ನು ನಿಗದಿಪಡಿಸಿರುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ನ್ಯಾಯಾಧಿಕರಣವು, ಸ್ಥೂಲನಕ್ಷೆ, ಸ್ಥಳ ಮಹಜರ್ ಮತ್ತು ಇತರೆ ಸೂಕ್ತ ದಸ್ತಾವೇಜುಗಳನ್ನು ಒಳಗೊಂಡಂತೆ, ಕಡತದ ಮೇಲೆ ಲಭ್ಯವಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ವಿಮರ್ಶಾತ್ಮಕ ಮೌಲ್ಯಮಾಪನದ ತರುವಾಯ, ಅದು ಅಪಘಾತವು ಮೋಟಾರು ಸೈಕಲ್ಲಿನ ಸವಾರನ ನಿರ್ಲಕ್ಷ್ಯ ಮತ್ತು ಐಷರ್ ಟ್ಯಾಂಕರ್ ಲಾರಿಯ ಚಾಲಕನ ನಿರ್ಲಕ್ಷ್ಯದ ಕಾರಣದಿಂದ ಉಂಟಾಗಿದ್ದು, ಅಪಘಾತ ಉಂಟಾಗಲು ಅವರಿಬ್ಬರೂ ಸಮಾನ ಹೊಣೆಗಾರಿಕೆಯನ್ನು ಹೊಂದಿರುತ್ತಾರೆಂಬ ನಿರ್ದಿಷ್ಟ ವಾಸ್ತವಾಂಶವನ್ನು ದಾಖಲಿಸಿರುತ್ತದೆಂಬುದನ್ನು ಕಾಣಬಹುದಾಗಿರುತ್ತದೆ. ತದನುಸಾರವಾಗಿ, ಇದು ಮೋಟಾರು ಸೈಕಲ್ಲಿನ ಸವಾರ ಮತ್ತು ಐಷರ್ ಟ್ಯಾಂಕರ್ ಲಾರಿಯ ಚಾಲಕನ ಮೇಲೆ ಶೇ. 50 : 50ರ ಅನುಪಾತದಲ್ಲಿ ಸಹಾಯಕಾರಿ ನಿರ್ಲಕ್ಷ್ಯವನ್ನು ನಿಗದಿಗೊಳಿಸಲಾಗಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ವಾಸ್ತವಾಂಶದ ಸದರಿ ಕಾರಣ ಮತ್ತು ನಿರ್ಣಯವು ನ್ಯಾಯಯುತವೂ ಮತ್ತು ಸರಿಯಾದುದು ಆಗಿರುತ್ತದೆ ಮತ್ತು ಮಧ್ಯಪ್ರವೇಶಿಕೆಗೆ ಅವಕಾಶವಿರುವುದಿಲ್ಲ.

14. ತದನುಸಾರವಾಗಿ, ಮೇಲೆ ಹೇಳಿದ ಚರ್ಚೆಯ ಹಿನ್ನೆಲೆಯಲ್ಲಿ, ನಾವು, ಪರಿಶೀಲನಾಂಶ–1ಕ್ಕೆ, ಪಕ್ಷಕಾರರಾಗಿರುವ ವಿಮಾಕಂಪನಿಯು ಇಡೀ ಐತೀರ್ಪು ನಷ್ಟಭರ್ತಿ ಮಾಡಲು ಬದ್ಧರಾಗಿರಬೇಕಾಗುತ್ತದೆ. ತರುವಾಯ, ಕಾನೂನಿಗನುಸಾರವಾಗಿ, ಇತರೆ ಖಾಸಗಿ ತಕ್ಸೀರುಗಾರನಿಂದ ಐತೀರ್ಪಿನ ಶೇ.50ರಷ್ಟನ್ನು ವಸೂಲಿ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದುಕೊಂಡಿರುತ್ತದೆ ಎಂದು ಅಭಿಪ್ರಾಯಪಟ್ಟು ನಕಾರಾತ್ಮಕವಾಗಿ ಈ ಮೂಲಕ ಉತ್ತರಿಸಿರುತ್ತೇವೆ.

ಪರಿಶೀಲನಾಂಶ ಸಂ. **II**: ಕಡತದಲ್ಲಿ ಲಭ್ಯವಾದ ಇಡೀ ವಿಷಯವನ್ನು ಪರಿಶೀಲಿಸಿದ ತರುವಾಯ, ಕ್ಲೇಮುದಾರರು ಮೃತನ ತಂದೆ–ತಾಯಿಯರು ಮತ್ತು ಸಹೋದರಿಯಲ್ಲದೆ ಬೇರೆಯವರಲ್ಲವೆಂಬುದನ್ನು ಒತ್ತಿ ಹೇಳಿರುತ್ತದೆ. ಮೃತನು ಅಪಘಾತದ ದಿನಾಂಕದಂದು ಸುಮಾರು 28 ವರ್ಷದ ವಯೋಮಾನದವನಾಗಿದ್ದು, ಎನ್.ಎಂ.ಸಿ. ಸ್ಪೆಷಾಲಿಟಿ ಹಾಸ್ಪಿಟಲ್, ಅಬುದಾಬಿ ಇಲ್ಲಿ ಅಕೌಂಟೆಂಟ್ ಆಗಿ ಕಾರ್ಯನಿರ್ವಹಿಸುತ್ತಾ, 3,500/– ದಿನಾರ್‌ಗಳಷ್ಟು ಸಂಬಳವನ್ನು ಗಳಿಸುತ್ತಿರುತ್ತಾನೆ. ಇದನ್ನು ರುಜುವಾತುಪಡಿಸಲು ಕ್ಲೇಮುದಾರರು ನಿಶಾನೆ ಪಿ.10 ವೇತನ ಪ್ರಮಾಣ ಪತ್ರವನ್ನು ಹಾಜರುಪಡಿಸಲಾಗಿರುತ್ತದೆ. ಮುಂದುವೆದು, ಸದರಿ ಆದಾಯ ಮತ್ತು ಆತನು ತನ್ನ ತಂದೆ–ತಾಯಿಯರಿಗೆ ಅವರ ಜೀವನ ನಿರ್ವಹಣೆಗಾಗಿ ನಿರಂತರವಾಗಿ ಹಣವನ್ನು ಕಳುಹಿಸುತ್ತಿದ್ದನೆಂಬುದನ್ನು ರುಜುವಾತುಪಡಿಸಲು, ಕ್ಲೇಮುದಾರರು ನಿಶಾನೆ 12ನ್ನು ಮತ್ತು ಮೃತನು, ಆತನ ತಂದೆ–ತಾಯಿಗೆ ನಿಗದಿತ ಮೊಬಲಗನ್ನು ಕಳುಹಿಸುತ್ತಿದ್ದನೆಂದು ತೋರಿಸಲು ಪಿ–13ನ್ನು ಹಾಜರುಪಡಿಸಿರುತ್ತಾನೆ. ನ್ಯಾಯಾಧಿಕರಣವು, ಸಾಕ್ಷ್ಯವನ್ನು ಒಂದು ಎ.ಇ.ಎಸ್.ಎಸ್.ನ ವಿನಿಮಯ ದರವು ಭಾರತೀಯ ರೂಪಾಯಿಗಳಲ್ಲಿ ರೂ.12ಕ್ಕೆ ಸಮನಾಗಿದೆಯೆಂಬ ವಿನಿಮಯ ದರವನ್ನೂ ಒಳಗೊಂಡಂತೆ ಕಡತದ ಮೇಲೆ ಲಭ್ಯವಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಮತ್ತು ಇತರೆ ಸೂಕ್ತ ವಿಷಯವನ್ನು ಹಾಗೂ ವಿವಿಧ ಇತರೆ ಆಯಾಮಗಳಿಂದ ಮೃತನ ಮಾಸಿಕ ಆದಾಯವು 42,000/– ರೂ.ಗಳಾಗಿತ್ತೆಂಬ ಅಭಿಪ್ರಾಯಕ್ಕೆ ಬರಲಾಗಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಸದರಿ ವಿಷಯವು, ನ್ಯಾಯಯುತವು ಮತ್ತು ಸರಿಯಾದುದು ಆಗಿರುತ್ತದೆ ಹಾಗೂ ನ್ಯಾಯನೀಡಿಕೆಯ ದೃಷ್ಟಿಯಿಂದ ಇದನ್ನು ಅಂಗೀಕರಿಸಿರುತ್ತೇವೆ.

15. ಈಗಾಗಲೇ ಹೇಳಲಾದಂತೆ, 42,000/– ರೂ.ಗಳೆಂದು ನಿರ್ಧರಿಸಲಾದ ಮಾಸಿಕ ಆದಾಯವನ್ನು ಎತ್ತಿ ಹಿಡಿಯಲಾಗಿರುತ್ತದೆ ಮತ್ತು ಒಪ್ಪಿಕೊಳ್ಳಲಾಗಿರುತ್ತದೆ. ಸರಿಯಾಗಿ ಕಂಡುಕೊಂಡಂತೆ ಸದರಿ ಮೊಬಲಗಿಗೆ ನಾವು ***ಸಂತೋಷ್ ದೇವಿ ಪ್ರಕರಣ*** (ಈ ಹಿಂದೆ ಹೇಳಿದ)ದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನ ಅನುಪಾತದ ಮೇರೆಗೆ ಭವಿಷ್ಯದ ರೂಪುರೇಷೆಗಳಿಗಾಗಿ

ಶೇ.30ರಷ್ಟನ್ನು ಸೇರಿಸಿರುತ್ತೇವೆ. ಹಾಗಾಗಿ ರೂ. 42,000/- ಕ್ಕೆ ಶೇ.30ರಷ್ಟನ್ನು (ಅಂದರೆ 12,600/- ರೂ.ಗಳು) ಸೇರಿಸಿದರೆ, ತಿಂಗಳಿಗೆ 54,600/- ರೂ.ಗಳಷ್ಟಾಗಿರುತ್ತದೆ. ವರ್ಷಕ್ಕೆ 6,55,200/- ರೂ.ಗಳೆಂದು ಲೆಕ್ಕ ಹಾಕಲಾಗಿದೆ. ಇದರಿಂದ ವೃತ್ತಿ ತೆರಿಗೆಗೆ ಸಂಬಂಧಿಸಿದಂತೆ 2,400/- ರೂ.ಗಳ ಮೊಬಲಗನ್ನು ಮತ್ತು ಆದಾಯ ತೆರಿಗೆಗೆ ಸಂಬಂಧಿಸಿದಂತೆ ಶೇ.30ರಷ್ಟನ್ನು (ಅಂದರೆ 1,95,840/-) ಕಡಿತಗೊಳಿಸಿದಲ್ಲಿ ಪ್ರತಿವರ್ಷ ಬರುವ ನಿವ್ವಳ ಆದಾಯವು 4,56,960/- ರೂ.ಗಳಷ್ಟಾಗಿರುತ್ತದೆ. ಮೃತವ್ಯಕ್ತಿಯು, ಅವಿವಾಹಿತನಾಗಿರುವುದರಿಂದ, ಮೃತನ ವೈಯುಕ್ತಿಕ ಮತ್ತು ಜೀವನ ನಿರ್ವಹಣೆಗಾಗಿ ಶೇ.50ರಷ್ಟನ್ನು ನಾವು ಕಳೆಯಬೇಕಾಗುತ್ತದೆ. ತದನುಸಾರವಾಗಿ, ಆತನ ವೈಯಕ್ತಿಕ ಮತ್ತು ಜೀವನ ನಿರ್ವಹಣೆಗೆ ಸಂಬಂಧಿಸಿದಂತೆ 4,56,960/- ರೂ.ಗಳಿಂದ ಶೇ.50ರಷ್ಟನ್ನು (ಅಂದರೆ 2,28,480/-) ಕಡಿತಗೊಳಿಸಿದಲ್ಲಿ, ನಿವ್ವಳ ಆದಾಯವು ವರ್ಷಕ್ಕೆ 2,28,480/- ರೂ.ಗಳಾಗುತ್ತವೆ. ಆದರೆ, ***ಸರಳ ವರ್ಮಾ*** ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ, ಮೃತವ್ಯಕ್ತಿಯು ಅವಿವಾಹಿತನಾಗಿದ್ದಲ್ಲಿ, ಅವಲಂಬನೆಯ ನಷ್ಟವನ್ನು ಲೆಕ್ಕಹಾಕುವುದಕ್ಕೆ ಸಂಬಂಧಿಸಿದಂತೆ, ಗುಣಕವನ್ನು ಅನ್ವಯಿಸುವಾಗ, ಮೃತವ್ಯಕ್ತಿಯ ಚಿಕ್ಕ ವಯಸ್ಸಿನ ತಂದೆ-ತಾಯಿಗಳ ವಯಸ್ಸನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಅಪಘಾತದ ದಿನಾಂಕದಂದು, ಮೃತವ್ಯಕ್ತಿಯು ಅವಿವಾಹಿತನಾಗಿದ್ದು, ಆತನ ತಾಯಿಯು ಸುಮಾರು 47 ವರ್ಷಗಳ ವಯೋಮಾನದವಗಳಾಗಿರುತ್ತಾಳೆ. ಆದ್ದರಿಂದ, ತಾಯಿಯ ಸದರಿ ವಯಸ್ಸಿಗೆ ಸಂಬಂಧಿಸಿದಂತೆ, ಅನ್ವಯವಾಗಬಹುದಾದ ಸರಿಯಾದ ಗುಣಕವು 13 ಆಗಿರುತ್ತದೆ. ಹಾಗಾಗಿ, ಅವಲಂಬನೆಯ ನಷ್ಟಕ್ಕಾಗಿ, ನ್ಯಾಯಾಧಿಕರಣವು ಐತೀರ್ಪು ನೀಡಿರುವ 42,84,000/- ರೂ.ಗಳಿಗೆ ಪ್ರತಿಯಾಗಿ 29,70,240/- ಅಂದರೆ (2,28,480/- X 13) ರೂ.ಗಳನ್ನು ಲೆಕ್ಕಹಾಕಲಾಗಿರುತ್ತದೆ.

16. ಮುಂದುವರೆದು, ನ್ಯಾಯಾಧಿಕರಣವು, ಸಾಂಪ್ರದಾಯಿಕ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಯುಕ್ತ ಪರಿಹಾರವನ್ನು ನೀಡುವಲ್ಲಿ ದೋಷವನ್ನು ಎಸಗಿರುತ್ತದೆ.

ಅದು ಕಡಿಮೆ ಪ್ರಮಾಣದ್ದಾಗಿರುತ್ತದೆ. ಆದ್ದರಿಂದ, ***ಸರಳ ವರ್ಮಾ*** ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ ಸಾಂಪ್ರದಾಯಿಕ ಶೀರ್ಷಿಕೆಗಳಡಿಯಲ್ಲಿ ನ್ಯಾಯಾಧಿಕರಣವು ಐತೀರ್ಪು ನೀಡಿರುವ ಪರಿಹಾರಕ್ಕೆ ಪ್ರತಿಯಾಗಿ ನಾವು ಸಂಪದದ ನಷ್ಟಕ್ಕಾಗಿ 25,000/- ರೂ.ಗಳನ್ನು, ಪ್ರೀತಿ ಮತ್ತು ವಾತ್ಸಲ್ಯದ ನಷ್ಟಕ್ಕೆ ಸಂಬಂಧಿಸಿದಂತೆ ಪ್ರತಿ ಕ್ಲೇಮುದಾರರಿಗೂ ತಲಾ 10,000/- ರೂ.ಗಳ ದರದಲ್ಲಿ 30,000/- ರೂ.ಗಳ ಮೊಬಲಗನ್ನು ಮತ್ತು ಸಾರಿಗೆ ಹಾಗೂ ಅಂತಿಮ ಸಂಸ್ಕಾರಕ್ಕಾಗಿ 25,000/- ರೂ.ಗಳ ಮೊಬಲಗನ್ನು ನೀಡಬೇಕೆಂದು ತೀರ್ಪು ನೀಡಿರುತ್ತೇವೆ. ಹಾಗಾಗಿ, ಮೋಟಾರು ಸೈಕಲ್ಲಿನ ಸವಾರನಿಂದಾದ ಸಹಾಯಕಾರಿ ನಿರ್ಲಕ್ಷ್ಯಕ್ಕೆ ಸಂಬಂಧಿಸಿದಂತೆ ಶೇ.50ರಷ್ಟನ್ನು ಕಡಿತಗೊಳಿಸಿದ ತರುವಾಯ, ನ್ಯಾಯಾಧಿಕರಣವು ಐತೀರ್ಪು ನೀಡಿದ್ದು 21,64,500/- ರೂ.ಗಳಿಗೆ ಪ್ರತಿಯಾಗಿ 30,50,240/- ರೂ.ಗಳೆಂದು ಒಟ್ಟು ಪರಿಹಾರವನ್ನು ಲೆಕ್ಕಹಾಕಿರುತ್ತೇವೆ.

17. ಪರಿಶೀಲನಾಂಶ ಸಂ.1ಕ್ಕೆ ಉತ್ತರಿಸುವಾಗ, ನ್ಯಾಯಾಧಿಕರಣವು, ಮೋಟಾರು ಸೈಕಲ್ಲಿನ ಸವಾರನಿಂದಾದ ಸಹಾಯಕಾರಿ ನಿರ್ಲಕ್ಷ್ಯಕ್ಕಾಗಿ ಶೇ.50ರಷ್ಟನ್ನು ಕಡಿತಗೊಳಿಸಿ, ಈ ನ್ಯಾಯಾಲಯದ (ಈ ಹಿಂದೆ ಹೇಳಿದ) ಪೂರ್ಣಪೀಠದಲ್ಲಿ ವಿಧಿಸಿದ ಕಾನೂನಾತ್ಮಕ ಅನಪಾತದ ಮೇರೆಗೆ ಓರಿಯಂಟಲ್ಸ್ ಕನ್ಸೂರೆನ್ಸ್ ಕಂಪನಿ ಲಿಮಿಟೆಡ್ ಇಡೀ ಐತೀರ್ಪಿನ ನಷ್ಟಭರ್ತಿಗೆ ಬದ್ಧವಾಗಿರುತ್ತದೆಂದು ಐತೀರ್ಪು ನೀಡಿರುವುದು ಸಮರ್ಥನೀಯವಾಗಿರುವುದಿಲ್ಲ. ಆದ್ದರಿಂದ, ವಾಸ್ತವವಾಗಿ, ಅರ್ಜಿ ಸಲ್ಲಿಸಿದ ದಿನಾಂಕದಿಂದ, ಠೇವಣಿ ಮಾಡುವ ದಿನಾಂಕದವರೆಗೆ ವಾರ್ಷಿಕ ಶೇ.6ರ ಬಡ್ಡಿದರದಲ್ಲಿ 8,85,740/- ರೂ.ಗಳಷ್ಟು ಪರಿಹಾರವನ್ನು ಹೆಚ್ಚಿಸಲಾಗಿರುತ್ತದೆ.

18. ತದನುಸಾರವಾಗಿ, ಮೇಲೆ ಹೇಳಿದ ಪ್ರಕರಣದ ವಾಸ್ತವಾಂಶಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ವಿಮಾಕಂಪನಿಯಿಂದ ಸಲ್ಲಿಸಲಾದ ಅಪೀಲು ಅಂತೆಯೇ ಕ್ಲೇಮುದಾರರು ಸಲ್ಲಿಸಿದ ಅಪೀಲು, ಇವುಗಳನ್ನು ಭಾಗಶಃವಾಗಿ ಅಂಗೀಕರಿಸಲಾಗಿರುತ್ತದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಹೆಚ್ಚುವರಿ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಉಡುಪಿ ಇವರು ಎಂ.ವಿ.ಸಿ. ಸಂ. 437/2009ರಲ್ಲಿ ಹೊರಡಿಸಿದ 4ನೇ ಮೇ 2012ರಂದಿನ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಈ ಮೂಲಕ ಮಾರ್ಪಾಡುಗೊಳಿಸಲಾಗಿರುತ್ತದೆ;

ದಿ ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಸಂಪೂರ್ಣವಾಗಿ ನಷ್ಟಭರಿಸಲು ಬದ್ಧವಾಗಿರಬೇಕೆಂದು ಅಭಿಪ್ರಾಯಪಟ್ಟು, ಕ್ಲೇಮುದಾರರ ಹೆಸರಿನಲ್ಲಿ ಐತೀರ್ಪು ನೀಡಿದ ಪರಿಹಾರದ ಪೈಕಿ ಶೇ.50ರಷ್ಟು ಕಡಿತ ಮಾಡಬೇಕೆಂಬುದನ್ನು ಈ ಮೂಲಕ ರದ್ದುಪಡಿಸಿರುತ್ತೇವೆ.

ಹಾಗಾಗಿ, ಮೇಲೆ ಹೇಳಿದಂತೆ ಕ್ಲೇಮುದಾರರಿಗೆ ನೀಡಿದ ಒಟ್ಟು ಪರಿಹಾರವನ್ನು, ಸಹಾಯಕಾರಿ ನಿರ್ಲಕ್ಷ್ಯಕ್ಕೆ ಸಂಬಂಧಿಸಿದಂತೆ ಶೇ.50ರಷ್ಟು ಕಡಿತಗೊಳಿಸಿದ ತರುವಾಯ ನ್ಯಾಯಾಧಿಕರಣವು ಐತೀರ್ಪು ನೀಡಿದ 21,64,500/– ರೂ.ಗಳಿಗೆ ಪ್ರತಿಯಾಗಿ 30,50,240/– ರೂ.ಗಳೆಂದು ಲೆಕ್ಕಹಾಕಲಾಗಿದ್ದು, 8,85,740/– ರೂ.ಗಳ ಮೊಬಲಗಿನಷ್ಟನ್ನು ಹೆಚ್ಚಿಸಲಾಗಿರುತ್ತದೆ.

ದಿ ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್‌ಗೆ, ತೀರ್ಪಿನ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ವಾರಗಳೊಳಗೆ, ತಾನು ಯಾವುದೇ ಮೊಬಲಗನ್ನು ಈಗಾಗಲೇ ಠೇವಣಿ ಮಾಡಿದ್ದಲ್ಲಿ, ಆ ಮೊಬಲಗನ್ನು ಕಡಿತಗೊಳಿಸಿದ ತರುವಾಯ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅದು ಜಾರಿಗೆ ಬರುವ ದಿನಾಂಕದವರೆಗೂ ಶೇ.6ರ ಬಡ್ಡಿ ದರದೊಂದಿಗೆ ಇಡೀ ಪರಿಹಾರವನ್ನು ಠೇವಣಿ ಮಾಡಲು ನಿರ್ದೇಶಿಸಲಾಗಿರುತ್ತದೆ.

ಆದಾಗ್ಯೂ, ಕಾನೂನಿಗನುಸಾರವಾಗಿ ಕೆಎ–20/ಎಸ್–9034 ನೋಂದಣಿ ಸಂಖ್ಯೆಯನ್ನು ಹೊಂದಿರುವ ಮೋಟಾರು ಸೈಕಲ್ಲಿಗೆ ವಿಮೆ ನೀಡಿರುವ ವಿಮಾ ಕಂಪನಿಯಿಂದ ಐತೀರ್ಪು ನೀಡಿರುವ ಮೊಬಲಗಿನಲ್ಲಿ ಶೇ.50ರಷ್ಟನ್ನು ವಸೂಲಿ

ಮಾಡಿಕೊಳ್ಳಲು ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್‌ಗೆ ಸ್ವತಂತ್ರವನ್ನು ಮೀಸಲಿರಿಸಲಾಗಿರುತ್ತದೆ.

8,85,700/– ರೂ.ಗಳಷ್ಟು ಹೆಚ್ಚಿಸಲಾದ ಪರಿಹಾರದ ಪೈಕಿ, ಯುಕ್ತ ಬಡ್ಡಿಯೊಂದಿಗೆ 5,00,000/– ರೂ.ಗಳ ಮೊಬಲಗನ್ನು, ಮೃತವ್ಯಕ್ತಿಯ ತಾಯಿಯಾದ ಮೊದಲ ಕ್ಲೇಮುದಾರಳು ನಿಯತವಾಗಿ ಬಡ್ಡಿಯನ್ನು ಪಡೆಯಲು ಅವಕಾಶ ಮಾಡಿಕೊಡುವುದರೊಂದಿಗೆ ಐದು ವರ್ಷಗಳು ನವೀಕರಿಸಬಹುದಾದಂತೆ ಹತ್ತು ವರ್ಷಗಳ ಅವಧಿಗಾಗಿ ಯಾವುದೇ ರಾಷ್ಟ್ರೀಕೃತ ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ ಮಾಡಿ ಆಕೆಯ ಹೆಸರಿನಲ್ಲಿ ಠೇವಣಿ ಮಾಡತಕ್ಕದ್ದು.

ಯುಕ್ತವಾದ ಬಡ್ಡಿಯೊಂದಿಗೆ 2,00,000/– ರೂ.ಗಳ ಮೊಬಲಗನ್ನು ಮೃತವ್ಯಕ್ತಿಯ ತಂದೆಯಾದ ಎರಡನೇ ಕ್ಲೇಮುದಾರನು ನಿಯತವಾಗಿ ಬಡ್ಡಿಯನ್ನು ಪಡೆಯಲು ಅವಕಾಶ ಮಾಡಿಕೊಡುವುದರೊಂದಿಗೆ ಐದು ವರ್ಷಗಳು ನವೀಕರಿಸಬಹುದಾದಂತೆ, ಹತ್ತು ವರ್ಷಗಳ ಅವಧಿಗಾಗಿ ಯಾವುದೇ ರಾಷ್ಟ್ರೀಕೃತ ಅಥವಾ ಅನುಸುಚಿತ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ ಮಾಡಿ ಆತನ ಹೆಸರಿನಲ್ಲಿ ಠೇವಣಿ ಮಾಡತಕ್ಕದ್ದು.

ಉಳಿದ 1,85,740/– ರೂ.ಗಳ ಮೊಬಲಗನ್ನು ಕೂಡಲೇ ಸಮಾನ ಅನುಪಾತದಲ್ಲಿ ಮೃತವ್ಯಕ್ತಿಯ ತಂದೆ–ತಾಯಿಗಳು, ಕ್ಲೇಮುದಾರ ಸಂ. 1 ಮತ್ತು 2 ಇವರ ಹೆಸರಿನಲ್ಲಿ ಬಿಡುಗಡೆ ಮಾಡತಕ್ಕದ್ದು.

ಆದಾಗ್ಯೂ, ನ್ಯಾಯಾಧಿಕರಣವು ಐತೀರ್ಪು ನೀಡಿದ ಪರಿಹಾರದ ಸಂಬಂಧದಲ್ಲಿ ಇದು ಆದೇಶಿಸಿದ ಪರಿಹಾರದ ಹಂಚಿಕೆಯನ್ನು ಮಾರ್ಪಾಡುಗೊಳಿಸದೆ ಉಳಿಸಿಕೊಳ್ಳಲಾಗಿರುತ್ತದೆ. ಎಂ.ಎಫ್.ಎ. ಸಂ. 7823/2012ರಲ್ಲಿ ವಿಮಾಕಂಪನಿಯು ಠೇವಣಿ ಮಾಡಿರುವ ಶಾಸನಾತ್ಮಕ ಮೊಬಲಗನ್ನು ಕೂಡಲೇ ಅಧಿಕಾರ ವ್ಯಾಪ್ತಿಯಿರುವ ನ್ಯಾಯಾಧಿಕರಣಕ್ಕೆ ರವಾನಿಸಲು ನಿರ್ದೇಶಿಸಲಾಗಿರುತ್ತದೆ.

ಗುಣಾರ್ಹತೆಗಳ ಆಧಾರದ ಮೇಲೆ ಮುಖ್ಯ ಅಪೀಲುಗಳ ವಿಲೆಯ ದೃಷ್ಟಿಯಿಂದ ಎಂ.ಎಫ್.ಎ. ಸಂ. 7823/2012ರಲ್ಲಿ ನಿರ್ದೇಶನಕ್ಕಾಗಿ ಸಲ್ಲಿಸಿದ ಐ.ಎ. ಸಂ. 1/2014ನ್ನು ನಿರರ್ಥಕವೆಂದು ಬಗೆದು ವಿಲೆ ಮಾಡಲಾಗಿರುತ್ತದೆ.

ತದನುಸಾರವಾಗಿ, ಕಚೇರಿಯು ಐತೀರ್ಪನ್ನು ಪಡೆದುಕೊಳ್ಳುವುದು.